ಅ.ದಾ.120/2023 ಪಿಡಬ್ಲ್ಯೂ-1

ದಿನಾಂಕಃ 02.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಡಿ.ಕೆ.ಪಿ. ವಕೀಲರಿಂದ:**

1 ನೇ ಪ್ರತಿವಾದಿಯವರು ನನ್ನ ಸೋದರ ಮಾವ. 2 ನೇ ಪ್ರತಿವಾದಿಯವರು ನನ್ನ ಮಾವನ ಮಗ. ನನ್ನನ್ನು ಗೋಣೀಬೀಡುವಿನ ಹೊಸಪುರ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿರುತ್ತದೆ. ನನ್ನ ತಾಯಿ ಅಕ್ಕಮ್ಮ ಗೋಣೀಬೀಡುವಿನ ದೇವರಮಕ್ಕಿಯ ವಾಸಿ. ನನ್ನ ತಾಯಿ ಮತ್ತು ಪ್ರತಿವಾದಿಯವರು ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ಸರಿ. ಪ್ರಸ್ತುತವಾಗಿ ನಾನು ಮೂಡಿಗೆರೆಯ ಜೆ.ಎಂ. ರೋಡ್ ನಲ್ಲಿ ವಾಸಿಸುತ್ತಿರುತ್ತೇನೆ. ಹೊಸಪುರದಲ್ಲಿ ನನ್ನ ಗಂಡನ ಹೆಸರಿನಲ್ಲಿ ಜಮೀನು ಇರುತ್ತದೆ ಮನೆ ಇರುವ ಬಗ್ಗೆ ನೆನಪಾಗುತ್ತಿಲ್ಲ. ನನ್ನ ತಾಯಿಗೆ 3 ಜನ ಮಕ್ಕಳು. ಅದರಲ್ಲಿ 2 ಹೆಣ್ಣುಮಕ್ಕಳು ಮತ್ತು 1 ಗಂಡು ಮಗ. ದಾವಾ ಸ್ವತ್ತನ್ನು ನನ್ನ ತಾಯಿ ನನ್ನ ಹೆಸರಿಗೆ ಉಯಿಲನ್ನು ಮಾಡಿದ್ದ ಕಾರಣ ನಾನು ಮಾತ್ರ ಈ ಪ್ರಕರಣದಲ್ಲಿ ನನ್ನ ತಾಯಿಯ ವಾರಸುದಾರಳಾಗಿ ಬಂದಿರುತ್ತೇನೆ. ನನ್ನ ತಾಯಿಗೆ ಜಮೀನು ದರ್ಕಾಸು ಮುಖಾಂತರ ಬಂದಿರುತ್ತದೆ. ನನ್ನ ಹೆಸರಿಗೆ ಬರೆದಿರುವ ಉಯಿಲನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನನ್ನ ತಾಯಿಗೆ ಮಂಜೂರಾದ ನಂತರದಲ್ಲಿ ದಾವಾ ಸ್ವತ್ತನ್ನು ಮೋಜಣಿ ಮಾಡಿಸಲಾಗಿರುತ್ತದೆ. ಅದರ ಬಾಬ್ತು ನಕ್ಷೆಯನ್ನು ಹಾಜರುಪಡಿಸಿರುತ್ತೇವೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.